**<u>ದಿನಾಂಕಃ 16.09.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.</u>**

<u>ಪಾಟೀ ಸವಾಲು ವಾದಿ ಪರ ಶ್ರೀ. ಎಂ ಟಿ ಎಸ್ ವಕೀಲರಿಂದಃ-</u>

ನಾನು 9ನೇ ತರಗತಿವರೆಗೂ ವಿಧ್ಯಾಭ್ಯಾಸ ಮಾಡಿದ್ದೇನೆ. ನನಗೆ ಕನ್ನಡ ಓದಲು ಮತ್ತು ಬರೆಯಲು ಬರುತ್ತದೆ ಎಂದರೆ ಸರಿ. ಪ್ರತಿವಾದಿ ನನಗೆ 5-6 ವರ್ಷಗಳಿಂದ ಪರಿಚಯ. ಪ್ರತಿವಾದಿಯು ತಮಗೆ ಹೇಗೆ ಪರಿಚಯ ಎಂದರೆ ಸಾಕ್ಷಿಯು ಆಕೆಯ ತಾಯಿ ನನ್ನ ಮಗಳ ಕಡೆಯಿಂದ ಪರಿಚಯ. ನನ್ನ ಮಗಳು ನಳಿನಾ ಚನ್ನಪಟ್ಟಣದ ಸಾರ್ವಜನಿಕ ಆಸ್ಪತ್ರೆಯಲ್ಲಿ ಸೂಪರ್ ವೈಸರ್ ಆಗಿ ಕೆಲಸ ಮಾಡುತ್ತಿರುತ್ತಾಳೆ. ಪ್ರತಿವಾದಿಯು ವೃತ್ತಿಯಲ್ಲಿ ಏನು ಕೆಲಸ ಮಾಡುತ್ತಾಳೆ ಎಂದು ಕೇಳಲಾಗಿ ಆಕೆ ಗೃಹಿಣಿ ಅಸ್ಪತ್ರೆಯಲ್ಲಿ ಕೆಲಸ ಮಾಡುತ್ತಾರೆ ಎನ್ನುತ್ತಾರೆ. ಪ್ರತಿವಾದಿಯ ಮಗಳು ಅಸ್ಪತ್ರೆಯಲ್ಲಿ ಕೆಲಸ ಮಾಡುತ್ತಿಲ್ಲ ಎಂದರೆ ಸಾಕ್ಷಿ ಮೊದಲು ಮಾಡುತ್ತಿದ್ದರು ಈಗ ಮಾಡುತ್ತಿಲ್ಲ ಎನ್ನುತ್ತಾರೆ. ಪ್ರತಿವಾದಿಯು ತಮ್ಮಿಂದ ಹಣವನ್ನು ಸಾಲವಾಗಿ ಪಡೆದುಕೊಂಡಿರುತ್ತಾರೆ ಎಂದು ತಾವು ತಮ್ಮ ದಾವಾ ಪತ್ರದಲ್ಲಿ ಹೇಳಿದ್ದು ಯಾವ ಕಾರಣಕ್ಕಾಗಿ ಸಾಲವನ್ನು ಪಡೆದಿರುತ್ತಾರೆ ಎಂದು ಹೇಳುವಿರಾ ಎಂದರೆ ಸಾಕ್ಷಿಯು ನಮಗೆ ಯಾವುದೋ ತೊಂದರೆ ಇದೆ ಹಾಗಾಗಿ ಸಾಲ ಬೇಕೆಂದು ಕೊಡಡಿ ಎಂದು ಕೇಳಿದ್ದರು ಎನ್ನುತ್ತಾರೆ. ತಾವು ಕಳಹಿಸಿದ ನೋಟೀಸ್ ನಲ್ಲಿ , ದಾವಾ ಪತ್ರ ದಲ್ಲಿ ಹಾಗೆಯೇ ಮುಖ್ಯ ಸಾಕ್ಷ್ಯ ಪ್ರಮಾಣ ಪತರದಲ್ಲಿ ಎನು ವಿಚಾರಗಳನ್ನು ಬರೆದಿದೆ ಎಂದು ತಿಳಿದುಕೊಂಡಿದ್ದೀರಾ ಎಂದರೆ ಹೌದು ಎನ್ನುತ್ತಾರೆ. ಪ್ರತಿವಾದಿಯು ತಮ್ಮಿಂದ ಯಾವುದೋ ತೊಂದರೆಗೆ ಹಣವನ್ನು ಸಾಲ ಪಡೆದಿರುತ್ತಾರೆ ಎಂದು ಬರೆಸಿದ್ದೀರಾ ಎಂದರೆ ಇಲ್ಲ ಎನ್ನುತ್ತಾರೆ. ನಾನು ಗೃಹಿಣಿ ಯಾವುದೇ ಕೆಲಸ ಮಾಡುತ್ತಿಲ್ಲ. ನಾನು ಯಾವುದೇ ಕೆಲಸ ಮಾಡುತ್ತಿಲ್ಲ ನನಗೆ ಯಾವುದೇ ವರಮಾನ ಇಲ್ಲ ಎಂದರೆ ಸಾಕ್ಷಿಯು ನನ್ನ ಗಂಡ ಸರ್ಕಾರಿ ಕೆಲಸದಲ್ಲಿ ಇದ್ದು ಮರಣ ಹೊಂದಿರುತ್ತಾರೆ ಹಾಗಾಗಿ ನನಗೆ ಪಿಂಚಣಿ ಬರುತ್ತದೆ ಎನ್ನುತಾರೆ. ತಾವು ಪಿಂಚಣಿ ಹಣ ಪಡೆಯುತ್ತಿರುವ ಬಗ್ಗೆ ದಾಖಲೆ ಹಾಜರುಮಾಡಿದ್ದೀರಾ ಎಂದರೆ ಇಲ್ಲ ಎನ್ನುತ್ತಾರೆ. ಪ್ರತಿವಾದಿಯು ತಮ್ಮಿಂದ ಸಾಲ ಪಡೆದಿರುತ್ತಾರೆ ಎಂದು

ಹೇಳಿದ್ದು, ಯಾವ ದಿನಾಂಕದಂದು ಹಣ ಬೇಕೆಂದು ಪ್ರತಿವಾದಿಯು ತಮ್ಮನ್ನು ಕೇಳಿರುತ್ತಾರೆ ಎಂದರೆ ಸಾಕ್ಷಿ ಜನವರಿ ಎಂದು ಹೇಳಿದ್ದು ದಿನಾಂಕ ನೆನಪಿಲ್ಲ ಎನ್ನುತ್ತಾರೆ. ಪ್ರತಿವಾದಿಯು ಸಾಲ ಬೇಕೆಂದು ಕೇಳಿದ ದಿನವೇ ತಾವು ಸಾಲ ಕೊಟ್ಟಿದ್ದೀರಾ ಎಂದರೆ ಸಾಕ್ಷಿಯು ಪ್ರತಿವಾದಿಯು ಸಾಲ ಬೇಕೆಂದು ಕೇಳಿದ 2-3ದಿನದ ನಂತರ ಹಣ ಕೊಟ್ಟಿದ್ದೇನೆ ಎನ್ನುತ್ತಾರೆ. ಪ್ರತಿವಾದಿಯು ತಮ್ಮನ್ನು ಸಾಲ ಬೇಕೆಂದು ಹಣ ಕೇಳಲು ಬಂದಾಗ ಯಾರು ಯಾರು ಇದ್ದರು ಎಂದರೆ ಸಾಕ್ಷಿ ನನ್ನ ಮಗಳು, ಪ್ರತಿವಾದಿಯ ಮಗಳು, ಪುಷ್ಪ, ಫೈಯಾಜ್ ಅಹಮ್ಮದ್ ಇದ್ದರು ಎಂದು ನುಡಿಯುತ್ತಾರೆ. ಸದರಿ ಯವರುಗಳು ಸಾಲ ಕೇಳುವ ಸಂದಶಭದಲ್ಲಿ ಇದ್ದರು ಎಂದು ತಾವು ತಮ್ಮ ನೋಟೀಸ್‌ನಲ್ಲಾಗಲೀ ದಾವಾ ಪತ್ರದಲ್ಲಾಗಲೀ ವಿಚಾರಣಾ ಪ್ರಮಾಣ ಪತ್ರದಲ್ಲಾಗಲೀ ಹೇಳಿದ್ದೀರಾ ಎಂದರೆ ಇಲ್ಲ ಎನ್ನುತ್ತಾರೆ. ಸಾಲ ಕೊಟ್ಟಿದ್ದೆ ಎಂದು ಹೇಳಿದ್ದೆ ಎಂದ ಸಂದರ್ಭದಲ್ಲಿ ಯಾರು ಯಾರು ಇದ್ದರು ಎಂದರೆ ಸಾಕ್ಷಿಯು ನನ್ನ ಮಗಳು, ಪ್ರತಿವಾದಿಯ ಮಗಳು, ಪುಷ್ಪ, ಫೈಯಾಜ್ ಅಹಮ್ಮದ್ ಇದ್ದರು ಎಂದು ನುಡಿಯುತ್ತಾರೆ. ಸಾಮಾನ್ಯವಾಗಿ ಒಬ್ಬ ವ್ಯಕ್ತಿ ಇನ್ನೊಬ್ಬ ವ್ಯಕ್ತಿಗೆ ಹಣವನ್ನು ಸಾಲವಾಗಿ ಕೊಟ್ಟರೇ ಅ ಹಣಕ್ಕೆ ಬಡ್ಡಿಯನ್ನು ಪಡೆಯುತ್ತಾರೆ ಎಂದರೆ ಸಾಕ್ಷಿಯು ನಾನು ಬಡ್ಡಿಗಾಗಿ ಹಣವನ್ನು ಕೊಟ್ಟಿಲ್ಲ ಪ್ರತಿವಾದಿಯು ನನ್ನನ್ನು ಸಾಲವಾಗಿ ಹಣ ಕೊಡುವಂತೆ ಕೇಳಿದ್ದರು ಹಾಗಾಗಿ ನಾನು ಹಣವನ್ನು ಸಾಲವಾಗಿ ಕೊಟ್ಟಿರುತ್ತೇನೆ ಎನ್ನುತ್ತಾರೆ. ನಿಪಿ-1 ದಾಖಲೆಯಲ್ಲಿ ಯಾವ ದಿನಾಂಕದಂದು ಹಣವನ್ನು ಪ್ರತಿವಾದಿಗೆ ಕೊಟ್ಟಿದೆ ಎಂದು ನಮೂದು ಇಲ್ಲ ಎಂದರೆ ಸರಿ. ನಿಪಿ-1ಮತ್ತು 2 ದಾಖಲೆಯಲ್ಲಿ ಬರೆದಿರುವ ಹಾಸ್ತಕ್ಷರಗಳು ಯಾರವು ಎಂದರೆ ಸಾಕ್ಷಿ ಫೈಯಾಜ್ ಅಹಮ್ಮದರವರು ಎನ್ನುತ್ತಾರೆ. ನಿಪಿ-1 ಮತ್ತು 2ಕ್ಕೆ ಫೈಯಾಜ್ ಅಹಮ್ಮದರವರು ತಮ್ಮ ಹಸ್ತಾಕ್ಷರದಲ್ಲಿ ಬರೆದಿದ್ದಾರೆ ಎಂದು ತಮ್ಮ ನೋಟೀಸ್, ದಾವಾಪತ್ರ, ಮತ್ತು ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಹೇಳಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಹಣಸಂದಾಯ ರಸೀದಿಯಲ್ಲಿ ದಿನಾಂಕವನ್ನು ತಿದ್ದಿ ಬರೆದಿದೆ ಎಂದರೆ ಸರಿ. ನಿಪಿ-1 ಅನ್ ಡಿಮ್ಯಾಂಡ್ ಪ್ರನೋಟ್ ನಲ್ಲಿ 2% ಮಾಸಿಕ ಬಡಿಡ ಎಂದು ನಮೂದು ಆಗಿದೆ ಎಂದರೆ ಸರಿ. ಯಾರಿಗಾದರೂ ಹಣವನ್ನುಬಡಿಡಗಾಗಿ

ಕೊಡಬೇಕಾದಲ್ಲಿ ಸರ್ಕಾರದಿಂದ ಲೇವಾದೇವಿ ಪರವಾನಿಗೆಯನ್ನು ಪಡೆದುಕ್ಕೊಳಬೇಕು ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿಯು ನನ್ನಿಂದ ಯಾವುದೇ ಹಣವನ್ನು ಸಾಲಕ್ಕಾಗಿ ಪಡೆದಿಲ್ಲ, ಸಾಲವಾಗಿ ಪಡೆದಿಲ್ಲ ಆದರೂ ಸಹ ನ್ಯಾಯಾಲಯದಲ್ಲಿ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಯು ಅವಿಧ್ಯಾವಂತೆ ಯಾಗಿದ್ದು ಹೇಗಾದರೂ ಆಕೆಯಿಂದ ಹಣ ಪಡೆಯಬೇಕೆಂಬ ಉದ್ದೇಶದಿಂದ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಃ ಇಲ್ಲ**

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕರಣ ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ.

ಸಹಿ/-

ಅಪರ ಸಿವಿಲ್ ನ್ಯಾಯಾಧೀಶರು ಹಾಗೂ ಜೆಎಂಎಫ್‌ಸಿ

ನ್ಯಾಯಾಲಯ, ಚನ್ನಪಟ್ಟಣ